
# ಮಿಮಿಗೆ ಬೇಸರವಾಗುತ್ತದೆ








ಇತರೆ ಪ್ರಾಣಿ ಮಕ್ಕಳ ಹಾಗೆ, ಮಿಮಿಯೂ ಕಾಡಿನಲ್ಲಿನ ಶಾಲೆಗೆ ಹೋದಳು.
ಚಿಕ್ಕ ಹಕ್ಕಿಗಳು, ಜಿರಾಫೆಗಳು, ಆನೆಗಳು, ಅಲಿಗೇಟರ್ಗಳು, ಕರಡಿಗಳು, ಹುಲಿಗಳೂ, ಸಿಂಹಗಳು, ಜಿಂಕೆಗಳು, ಮಂಗಗಳು, ಅಳಿಲುಗಳು ಹಾಗೂ ಮೊಲಗಳು ಈ ಶಾಲೆಗೆ ಬಂದವು.
ಮಿಮಿ ಮಿಸೆಸ್ ಬೇರ್ಳ ಮನೆಯಲ್ಲಿ ಹೋದ ಶಾಲೆಗಿಂತ ಇದು ತುಂಬಾ ದೊಡ್ಡದಿತ್ತು.ಅವಳಿಗೆ ಈಗ ಹಲವು ಬೇರೆ ಬೇರೆ ಶಿಕ್ಷಕರಿದ್ದರು.




ಮಿಸ್ಟರ್ ಫಾಕ್ಸ್ ಅವರಿಗೆ ಅಂಕಿಗಳು ಮತ್ತು ಗಣಿತವನ್ನು ಹೇಳಿಕೊಟ್ಟರು.




ಮಿಸ್ ನಿಂಜ ಚಿತ್ರಬಿಡಿಸುವುದು ಕಲಿಸಿದರು ಮತ್ತು ಕಥೆಗಳನ್ನು ಹೇಳಿದರು.




ಮಿಸ್ ನೈಟಿಂಗೇಲ್ ಸಂಗೀತ ಹಾಡು ಹಾಡುಗಾರಿಕೆ ಕಲಿಸಿದರು.



ಮಿಸ್ಟರ್.ಚಿಂಪಾಂಜಿ ಪ್ರತಿದಿನ ಅವರಿಗೆ ವ್ಯಾಯಾಮ ಮಾಡಿಸಿದರು ಮತ್ತು ಬಾಸ್ಕೆಟ್ ಬಾಲ್ ಆಡಿಸಿದರು.






ಮಿಮಿ ಶಾಲೆಯಲ್ಲಿ ಹೊಸ ಗೆಳೆಯರನ್ನು ಮಾಡಿಕೊಂಡಳು ಹಾಗೂ ತನ್ನ ಸ್ನೇಹಿತರೊಂದಿಗೆ ಕಣ್ಣಾಮುಚ್ಚಾಲೆ ಮತ್ತು ಕುಂಟಾಬಿಲ್ಲೆ ಖುಷಿಯಿಂದ ಆಡುತ್ತಿದ್ದಳು.
ತಮ್ಮ ಆಟಗಳಲ್ಲಿ ಅವಳನ್ನು ಸೇರಿಸಿಕೊಂಡ ಅವರು ಒಳ್ಳೆಯ ಹಾಗೂ ಸಹಾಯಕ ಗೆಳೆಯರಾಗಿದ್ದರು.



ತನ್ನ ಊಟವನ್ನು ಅವರೊಂದಿಗೆ ಹಂಚಿಕೊಳ್ಳಲು ಅವಳು ಇಷ್ಟಪಡುತ್ತಿದ್ದಳು....ಹಾಗೂ ಕೆಲವೊಮ್ಮೆ ಅವಳ ಸ್ನೇಹಿತರು ಇಷ್ಟಪಡುವ ಪಿಜ್ಜ ಮತ್ತು ಕೇಕ್ಗಳನ್ನು ತನ್ನ ಅಮ್ಮನಿಂದ ಮಾಡಿಸುತ್ತಿದ್ದಳು.




ಆದರೆ ಶಾಲೆಯಲ್ಲಿ ಒಬ್ಬನೇ ...ತೊಂದರೆ ಕೊಡುವ ಕಾವ್ ಎಂಬ ಹೆಸರಿನ ತುಂಟ ಕಾಗೆ ಇದ್ದನು.
ಅವನು ಹಲವೊಮ್ಮೆ ತನ್ನ ಸಹಪಾಠಿಗಳ ಅನುಮತಿಯಿಲ್ಲದೇ ಅವರ ಊಟದ ಡಬ್ಬಿ ತೆರೆದು ತಿಂಡಿಯನ್ನು ತಿಂದು ಬಿಡುತ್ತಿದ್ದನು...ಅವರಿಗೆ ಇದು ಬೇಸರ ತರಿಸುತ್ತಿತ್ತು.





ಯಾರೂ ಅಲ್ಲಿಲ್ಲದಾಗ ತುಂಟ ಕಾವ್ ಅವರ ಪೆನ್ಸಿಲ್ಗಳನ್ನು ಕದಿಯುತ್ತಿದ್ದನು. ನಿಜವಾಗಿ ಅದು ಅವನ ತುಂಬಾ ಕೆಟ್ಟ ಗುಣವಾಗಿತ್ತು!



ಒಂದು ದಿನ,  ಮಿಮಿ ಶಾಲೆಗೆ ಬರುತ್ತಿದ್ದಾಗ, ಕಾವ್ ಒಂದು ಮರದ ಮೇಲೆ ಕುಳಿತಿದ್ದ.
"ಮೀ-ಮೀ ಒಂದು ವಿಚಿತ್ರ, ಅವಳಿಗೆ ಅವಳ ಸ್ವಂತ ಅಮ್ಮ ಮತ್ತು ಅಪ್ಪ ಇಲ್ಲ!"ಎಂದು ಕೂಗಿ ಹೇಳುತ್ತಿದ್ದ.
ಮಿಮಿ ಸಿಟ್ಟಿನಿಂದ, "ನನಗೆ ಅಮ್ಮ ಮತ್ತು ಅಪ್ಪ ಇದ್ದಾರೆ," ಎಂದು ಕೂಗಿದಳು.
"ಆದರೆ ಅವರು ನಿಜವಾದ ಅಮ್ಮ ಅಪ್ಪ ಅಲ್ಲ ಏಕೆಂದರೆ ನೀನು ದತ್ತು ಪುತ್ರಿ", ಎಂದು ಕಾವ್ ಹಂಗಿಸಿದನು.




ಇತರ ಪ್ರಾಣಿಗಳು ಸುತ್ತಲೂ ಬಂದು ಕಾವ್ ಹೇಳಿದ್ದನ್ನು ಕೇಳುತ್ತಿದ್ದರು ಎಂದು ಈಗ ಮಿಮಿಯ ಗಮನಕ್ಕೆ ಬಂತು.
ಎಲ್ಲರಿಗೂ ಆಶ್ಚರ್ಯವಾಗಿತ್ತು.
ಕೆಲವರು ಸುಮ್ಮನಿದ್ದರೆ ಕೆಲವರು ತಮ್ಮ ತಮ್ಮಲ್ಲಿಯೇ ಗುಸುಗುಸು ಮಾತಾಡಿಕೊಳ್ಳುತ್ತಿದ್ದರು.
"ನಿಜವಾ ಮಿಮಿ, ಹಾಗಾದರೆ ನೀನು ನಿನ್ನ ಹೆತ್ತವರ ಜೊತೆಗಿಲ್ಲವೇ?"ಎಂದು ಅಳಿಲು ಕೇಳಿತು.
"ಮಿಮಿ ತನ್ನ ಅಮ್ಮನ ಹೊಟ್ಟೆಯಿಂದ ಬಂದಿಲ್ಲ," ಎಂದು ಚಿಕ್ಕ ಬೇರ್ ಹೇಳಿತು.




ಆ ದಿನ ಮಿಮಿ ಶಾಲೆಯಲ್ಲಿ ಯಾರೊಂದಿಗೂ- ತನ್ನ ಪ್ರಿಯ ಸ್ನೇಹಿತರಾದ ಬನ್ನಿಗಳು ಹಾಗೂ ಜಿಂಕೆಗಳೊಂದಿಗೂ ಮಾತನಾಡಲಿಲ್ಲ. ಆಟ ಆಡಲು ಅಥವಾ ಮಧ್ಯಾಹ್ನದ ಊಟಕ್ಕಾಗಿಯೂ ಹೊರಗೆ ಹೋಗದೇ, ಅವಳು ಒಬ್ಬಂಟಿಯಾಗಿಯೇ ಕುಳಿತಿದ್ದಳು.








ಆ ಮಧ್ಯಾಹ್ನ ಒಬ್ಬಳೇ ಶಾಲೆಯಿಂದ ಮನೆಗೆ ಹಿಂತಿರುಗುವಾಗ ಅವಳು ಬಹಳ ಬೇಸರಗೊಂಡಿದ್ದಳು.




"ನೀನು ಯಾಕೆ ಇವತ್ತು ನಿನ್ನ ಊಟವನ್ನು ಮಾಡಿಲ್ಲ?"ಎಂದು ಅಮ್ಮ ಕೇಳಿದಳು, "ಇದು ನಿನ್ನ ಇಷ್ಟದ ಪುಲಾವ್!"
"ಏನಾಯಿತು ಮಿಮಿ?ನೀನು ಇಂದು ಬಹಳ ದುಃಖದಿಂದ ಇರುವಂತೆ ಕಾಣುತ್ತದೆ", ಎಂದು ಅಪ್ಪ ಕೇಳಿದರು.



ಆಗ ಮಿಮಿ ಶಾಲೆಯಲ್ಲಿ ಆ ದಿನ ನಡೆದದ್ದನ್ನು ಹೇಳಿದಳು. ಅವರೂ ಮಿಮಿಗಾಗಿ ದುಃಖಪಟ್ಟರು.



"ನಿನಗೊಂದು ಹೇಳಲಾ" "ಮಿಮಿಗೆ ಇದು ಬಹಳ ದೀರ್ಘ ಮತ್ತು ಕಷ್ಟದ ದಿನವಾಗಿತ್ತು, ಹಾಗಾಗಿ ನಾವು ಇಂದು ಮಲಗೋಣ ಮತ್ತು ಇದರ ಕುರಿತು ನಾಳೆ ಮಾತನಾಡೋಣ".
"ಆಯಿತು", ಎಂದು ಮಿಮಿಯನ್ನು ಚುಂಬಿಸುತ್ತಾ ಮಮ್ಮಿ ಹೇಳಿದಳು, "ನಾನು ನಿನಗೆ ಮಲಗುವ ಸಿದ್ಧತೆಯಲ್ಲಿ ಸಹಾಯ ಮಾಡುತ್ತೇನೆ".
"ನೆನಪಿಡು ಮಿಮಿ, ಯಾರೇ ಏನೇ ಹೇಳಿದರೂ, ನಾವು ನಿನ್ನ ತಂದೆ ತಾಯಿಗಳು ಮತ್ತು ಯಾವಾಗಲೂ ಹಾಗೆಯೇ ಇರುತ್ತೇವೆ," ಎಂದು ಅಪ್ಪ ಹೇಳಿದರು.

ಸಮುದಾಯ ಮಕ್ಕಳ ಮತ್ತು ಹದಿಹರೆಯದವರ ಮಾನಸಿಕ ಆರೋಗ್ಯ ಸೇವೆಗಳ ಯೋಜನೆ,
ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರ ಇಲಾಖೆ,
ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ರಾಷ್ಟ್ರೀಯ ಸಂಸ್ಥೆ (ನಿಮ್ಹಾನ್ಸ್)
(ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ)
ಹೊಸೂರು ರಸ್ತೆ, ಬೆಂಗಳೂರು–560029
**Website:www.nimhans.ac.in**
**Email :capnimhans@gmail.com**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ನೆರವಿನೊಂದಿಗೆ

ವಿನ್ಯಾಸ ಮತ್ತು ಕಲೆ: ಸತೀಶ್ ರಾಮ್